# ಭಾರತದಲ್ಲಿ ಬ್ರೆಸ್ಟ್ ಕ್ಯಾನ್ಸರ್

## ವಾಸ್ತವ ಮತ್ತು ಭವಿಷ್ಯದ ಪ್ರಶ್ನೆಗಳು



ಸ್ತನ ಕ್ಯಾನ್ಸರ್ ವಿಷಯದಲ್ಲಿ ಭಾರತೀಯ ಮಹಿಳೆಯರು ಮೊದಲ ಸ್ಥಾನದಲ್ಲಿದ್ದಾರೆ ಎನ್ನುವುದೊಂದು ಖೇದದ ಸಂಗತಿ. ಆದರೆ, ಸ್ತನ ಕ್ಯಾನ್ಸರ್ ಸ್ಕ್ರೀನಿಂಗ್ ಕಾರ್ಯಕ್ರಮಗಳು ಮತ್ತು ಚಿಕಿತ್ಸಾ ಸೌಕರ್ಯಗಳಲ್ಲಿ ಹೆಚ್ಚಳ, ಉತ್ತಮ ಆರೋಗ್ಯ ಜಾಗೃತಿಯಿಂದಾಗಿ ಪರಿಸ್ಥಿತಿಯನ್ನು ಬದಲಿಸಬಲ್ಲುದಾಗಿದೆ.

2008-2012ರ ಅವಧಿಯಲ್ಲಿ ಸ್ತನ ಕ್ಯಾನ್ಸರ್ ಶೇ. 11.54 ಹೆಚ್ಚಳ ಮತ್ತು ಮರಣ ಪ್ರಮಾಣ ಶೇ. 13.82 ಹೆಚ್ಚಾಗಿದೆ. ಇದು ಗಂಭೀರವಾಗಿ ಚಿಂತಿಸಬೇಕಾದ ವಿಷಯವಾಗಿದೆ.

### ಜಾಗತಿಕ ಹೋಲಿಕೆ

**2008 ರಲ್ಲಿ ಅಮೆರಿಕದಲ್ಲಿ 1,82,000 ಸ್ತನ ಕ್ಯಾನ್ಸರ್ ಪ್ರಕರಣಗಳು ವರದಿಯಾಗಿವೆ. ಸುಮಾರು 40,000 ಸಾವುಗಳು ಸಂಭವಿಸಿವೆ. ಭಾರತದಲ್ಲಿ 1,15,000 ಹೊಸ ಪ್ರಕರಣಗಳು ಪತ್ತೆಯಾಗಿದ್ದು, ಸುಮಾರು 53000 ಸಾವುಗಳು ಸಂಭವಿಸಿವೆ. ಅಂದರೆ, ಸುಮಾರು ಅರ್ಧದಷ್ಟು ರೋಗಿಗಳು ಸಾವಿಗೀಡಾಗಿರುವುದು ಆತಂಕಕಾರಿಯಾಗಿದೆ.**



### ಕಾರಣಗಳು

ವೈವಾಹಿಕ ಸ್ಥಾನಮಾನ, ವಾಸಸ್ಥಳ (ನಗರ/ಗ್ರಾಮೀಣ), ಸ್ತನ್ಯಪಾನ, ಸ್ಥೂಲಕಾಯ, ಆಲ್ಕೋಹಾಲ್ ಸೇವನೆ, ತಂಬಾಕು ಸೇವನೆ, ಧೂಮಪಾನ, ವ್ಯಾಯಾಮದ ಕೊರತೆ, ಬದಲಾದ ಆಹಾರ ಪದ್ಧತಿ, ಪರಿಸರ ಅಂಶಗಳು ಸ್ತನ ಕ್ಯಾನ್ಸರ್‌ಗೆ ಕಾರಣವಾಗುತ್ತವೆ. ಆದಾಗ್ಯೂ ಕಿರಿಯ ಮಹಿಳೆಯರಲ್ಲಿ ಹೆಚ್ಚಿನ ಸ್ತನ ಕ್ಯಾನರ್‌ಗೆ ಕಾರಣ ತಿಳಿದಿಲ್ಲ.

ಅರಿವಿನ ಕೊರತೆ, ವಿಳಂಬದ ಕೊರತೆ, ಭಾರತದ ಕೆಲವು ಪ್ರದೇಶಗಳಲ್ಲಿ ಹಣಕಾಸಿನ ನಿರ್ಬಂಧಗಳು, ರೋಗ ನಿರ್ಣಯದಲ್ಲಿ ವಿಳಂಬ ಇತ್ಯಾದಿಗಳಿಂದ ಮರಣ ಪ್ರಮಾಣ ಹೆಚ್ಚುತ್ತಿದೆ.

ಸಂಘಟಿತ ಸ್ತನ ಕ್ಯಾನ್ಸರ್ ಸ್ಕ್ರಿನಿಂಗ್ ಕಾರ್ಯಕ್ರಮದ ಕೊರತೆ, ರೋಗನಿರ್ಣಯದ ಸಹಾಯಕಗಳ ಕೊರತೆ ಮತ್ತು ಪ್ರಧಾನವಾಗಿ ಪಿತೃಪ್ರಭುತ್ವದ ಭಾರತೀಯ ಸಮಾಜದಲ್ಲಿ ಹೆಣ್ಣುಮಕ್ಕಳ ಆರೋಗ್ಯದ ಕಡೆಗೆ ಸಾಮಾನ್ಯ ಉದಾಸೀನತೆಯೂ ಸ್ತನ ಕ್ಯಾನ್ಸರ್ ಘಟನೆಗಳಿಗೆ ಕಾರಣವಾಗುವ ನ್ಯೂನತೆಗಳಾಗಿವೆ.

ಜಾಗೃತಿ ಕಾರ್ಯಕ್ರಮಗಳು, ಆರಂಭಿಕ ಪತ್ತೆಹಚ್ಚುವಿಕೆಗಾಗಿ ಸ್ಕ್ರೀನಿಂಗ್ ಕಾರ್ಯಕ್ರಮಗಳು ಮತ್ತು ಚಿಕಿತ್ಸಾ ಸೌಕರ್ಯಗಳ ಲಭ್ಯತೆ ಸೇರಿದಂತೆ ಸ್ತನ ಕ್ಯಾನ್ಸರ್‌ಗೆ ಮಲ್ಟಿಡಿಸಿಪ್ಲಿನರಿ ವಿಧಾನವು ಈ ರೋಗದಿಂದ ಮರಣ ಸಂಭವಿಸುವುದನ್ನು ಕಡಿಮೆ ಮಾಡಲು ಅಗತ್ಯವಾಗಿವೆ.

ಸರ್ಕಾರ/ ಸರ್ಕಾರಿ ಸಂಸ್ಥೆಗಳು, ಮಾಧ್ಯಮಗಳು, ಸ್ವಯಂ ಸೇವಾ ಸಂಸ್ಥೆಗಳು, ವೈದ್ಯಕೀಯ ಸಂಸ್ಥೆಗಳು ಹೀಗೆ ಎಲ್ಲ ಸ್ತರದಿಂದ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಸ್ತನ್ಯಪಾನ ಮತ್ತು ಅದರ ರಕ್ಷಣಾತ್ಮಕ ಪರಿಣಾಮಗಳ ಬಗ್ಗೆ ಕೂಡಾ ಅರಿವು ಮೂಡಿಸಬೇಕಿದೆ.

| ಡಾ. ಸಂಜೀವ ಕುಲಗೋಡ,
ತತ್ವದರ್ಶ ಆಸ್ಪತ್ರೆ ಹುಬ್ಬಳ್ಳಿ